ದಿನಾಂಕ 24-07-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

4) ಮೃತನ ಶವವನ್ನು ಶವಗಾರದಲ್ಲಿ ಸಾಗಿಸುವಾಗಲೂ ಸಹ 2 ನೇ ಅರೋಪಿ ಪೋನ್ ನಲ್ಲಿ ಮಾತನಾಡುತ್ತಿದ್ದ. ಆತನಲ್ಲಿ ಆತನ ಅಣ್ಣನಿಗೆ ಹೀಗೆ ಆಗಿದೆ ಎನ್ನುವ ಯಾವುದೇ ಭಾವನೆ ಇರಲಿಲ್ಲ. ನಂತರ ನನಗೆ ಪೊಲೀಸರಿಂದ ಮೃತನು, ಆತನ ಮಗ ಚಾಸಾ-3 ಈತನಿಗೆ ಮನೆಯಲ್ಲಿ ಪದೇ ಪದೇ ಮೊಬೈಲ್ ನೋಡುತ್ತಿದ್ದಾನೆ ಎಂಬ ಕಾರಣಕ್ಕೆ ಬೈದಿದ್ದು, ನಂತರ ಆ ವಿಷಯವಾಗಿ ಮೃತ ಮತ್ತು ಆತನ ಹೆಂಡತಿ 1 ನೇ ಅರೋಪಿಯೊಂದಿಗೆ ತಂಟೆಯಾಗಿ, ನಂತರ ಮೃತನು 1 ನೇ ಅರೋಪಿಗೆ ಹಲ್ಲೆ ಮಾಡಲು ಹೋದಾಗ, 1 ನೇ ಅರೋಪಿ ಆತನನ್ನು ದೂಕಿದ್ದು, ಆಗ ಆತನ ತಲೆ ಗೋಡೆಗೆ ಹೊಡೆದು, ಆತ ಬಿದ್ದದ್ದು, ಆಗ ಆತ ತೀರಿದ್ದನೆಂದು ತಿಳಿದು, 1 ಮತ್ತು 2 ನೇ ಅರೋಪಿತರು ಮೃತನನ್ನು ಸ್ಕೂಟರ್ ನಲ್ಲಿ ಹೆಜಮಾಡಿಯ ಗುಂಡಿ ರಸ್ತೆಯಲ್ಲಿರುವ ತೋಡಿಗೆ ಹಾಕಿ, ಮರಳಿ ಬಂದು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು ಎಂದು ತಿಳಿದಿತ್ತು. ಪೊಲೀಸರು ನನ್ನನ್ನು ವಿಚಾರಿಸಿದ್ದರು. ನಾನು ಹೇಳಿಕೆ ಕೊಟ್ಟಿದ್ದೆ.

**ಪಾಟೀಸವಾಲುಃ ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ನಮ್ಮ ಮತ್ತು ಆರೋಪಿತರ ಮನೆಗಳ ನಡುವೆ 2 – 3 ಮನೆಗಳ ಅಂತರ. ನನಗೆ ಆದಿನ ಚಾಸಾ-8 ಮತ್ತು 2 ನೇ ಅರೋಪಿ ಕರೆದಿದ್ದರು. ನಾನು ಅಲ್ಲಿ 4-5 ವರ್ಷಗಳಿಂದ ವಾಸವಾಗಿದ್ದೇನೆ. ಅವರು ಅಲ್ಲಿ ಎಷ್ಟು ವರ್ಷದಿಂದ ವಾಸವಾಗಿದ್ದಾರೆ ಎಂದು ಗೊತ್ತಿಲ್ಲ. ನಾವು ಪಡುಬಿದ್ರೆಯ ಆಸ್ಪತ್ರೆಗೆ ಹೋದಾಗ ಸಮಯ 1.50 – 1.55 ಆಗಿತ್ತು. ನಾನು ಮನೆಯಿಂದ ನೇರ ಆಸ್ಪತ್ರೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಆ ಜಾಗೆಗೆ ಹೋಗಿ ಆಸ್ಪತ್ರೆಗೆ ಹೋಗಿದ್ದೆವು. ಮೃತನು ಹೇಗೆ ತೋಡಿಗೆ ಬಿದ್ದಿದ್ದ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಮೃತನ ಕುತ್ತಿಗೆಯ ಕೆಳಗೆ ಗಾಯವಾಗಿತ್ತು ಎಂಬ ಬಗ್ಗೆ ನಾನು ಪೊಲೀಸರಿಗೆ ಹೇಳಿಲ್ಲ.

2) ಪೊಲೀಸರಿಗೆ ನಾನು ಹೇಳಿಕೆ ಕೊಟ್ಟದ್ದು ಮೃತನ ಮನೆಯ ಹತ್ತಿರ. ಅದು ತಾರೀಕು 26-05-2020 ರಂದು. ಆಗ ಚಾಸಾ-8 ಮತ್ತು ಪಕ್ಕದ ಮನೆಯವರು ಇದ್ದರು. ಅಲ್ಲಿ ಪೊಲೀಸರು ಬರೆದುಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ, ಅದು ಮೌಖಿಕ ಹೇಳಿಕೆ.

3) ಮಣಿಪಾಲದ ಆಸ್ಪತ್ರೆಗೆ ಬಂದಾಗ ಸುಮಾರು 3.30 ಗಂಟೆಯ ಸಮಯ ಇರಬಹುದು. ಅಲ್ಲಿ ಸುಮಾರು 10 – 15 ನಿಮಿಷ ಇದ್ದೆವು. ನಾನು ಮರಳಿ ಮನೆಗೆ ಬಂದಿದ್ದೆ. ಆಗ ಸುಮಾರು 4.40 ಗಂಟೆ ಇರಬಹುದು. ಆಗ ನಾನು ಮಲಗಿದ್ದೆ. ಚಾಸಾ-8, 2 ನೇ ಅರೋಪಿ ನನ್ನ ಮನೆಗೆ ಬಂದು ಕರೆದಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಅವರೊಂದಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಈಗ ಪೊಲೀಸರಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನು ತನ್ನ ಅಜಾಗರೂಕತೆ ಚಾಲನೆಯಿಂದ ತೀರಿದ್ದನು ಎಂದು ನನಗೆ ತಿಳಿದಿದ್ದರೂ ಸಹ, ಈಗ ಆರೋಪಿತರಿಗೆ ತೊಂದರೆ ಕೊಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ